ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ ಅರ್ಜಿದಾರರ ಪರ ವಕೀಲರಿಂದಃ-

ಪ್ರಥಮ ವರ್ತಮಾನ ವರದಿಯ ದೃಢೀಕೃತ ನಕಲನ್ನು ನಿಪಿ-1 ಎಂದು, ದೂರಿನ ದೃಢೀಕೃತ ನಕಲನ್ನು ನಿಪಿ-2 ಎಂದು, ದೋಷಾರೋಪಣಾ ಪಟ್ಟಿಯ ದೃಢೀಕೃತ ನಕಲನ್ನು ನಿಪಿ-3 ಎಂದು, ಸ್ಥಳ ಪಂಚನಾಮೆಯ ದೃಢೀಕೃತ ನಕಲನ್ನು ನಿಪಿ-4 ಎಂದು, ಗಾಯದ ಪ್ರಮಾಣ ಪತ್ರವನ್ನು ನಿಪಿ-5 ಎಂದು, ಐಎಂವಿ ವರದಿಯ ದೃಢೀಕೃತ ನಕಲನ್ನು ನಿಪಿ-6 ಎಂದು, ಡಿಸ್ಚಾರ್ಜ್ ಸಮ್ಮರಿಯನ್ನು ನಿಪಿ-7 ಎಂದು, 18 ಬಿಲ್ಲುಗಳನ್ನು ಹಾಜರುಮಾಡಿದ್ದು ಅವುಗಳನ್ನು ಒಟ್ಟಾಗಿ ನಿಪಿ-8 ಎಂದು ಗುರುತಿಸಲಾಯಿತು.

ಪಾಟೀ ಸವಾಲು 2ನೇ ಎದುರುದಾರರ ಪರ ವಕೀಲರಿಂದಃ-

ನಾನು ವ್ಯವಸಾಯ ಮಾಡಿಕೊಂಡು ಜೀವನ ಮಾಡುತ್ತಿದ್ದೇನೆ. ಅಪಘಾತವಾದ ದಿನಾಂಕ ಮತ್ತು ಸಮಯ ನನಗೆ ಗೊತ್ತಿಲ್ಲ. ಮೋಟಾರ್ ಸೈಕಲ್ ನಂಬರ್ ನನಗೆ ಗೊತ್ತಿಲ್ಲ. ಅಪಘಾತವಾದಾಗ ನನ್ನ ಜೊತೆಯಲ್ಲಿ ಬೇರೆ ಯಾರು ಇರಲಿಲ್ಲ. 2 ಚಕ್ರ ಗಾಡಿ ನನಗೆ ಡಿಕ್ಕಿ ಹೊಡೆದಿರುತ್ತದೆ ನಂಬರ್ ನನಗೆ ಯಾರು ಹೇಳಿರುವುದಿಲ್ಲ. ನಾನು ಆಸ್ಪತ್ರೆಗೆ ಬಂದನಂತರ ನನ್ನ ಮಕ್ಕಳು ಮರಿಗಳು ಯಾವ ವಾಹನದಿಂದ ಅಪಘಾತವಾಗಿರುತ್ತದೆ ಎಂದ ತಿಳಿಸಿರುತ್ತಾರೆ. ಪೊಲೀಸರು ಹೇಳಿರುವುದಿಲ್ಲ ಗಾಡಿಯನ್ನು ತೋರಿಸಿರುವುದಿಲ್ಲ. ನನ್ನ ಮಕ್ಕಳು ತಿಳಿದುಕೊಂಡು ದೂರು ನೀಡಿರುತ್ತಾರೆ. ವಾಹನದ ಬಣ್ಣ ಗೊತ್ತಾಗುವುದಿಲ್ಲ. ನನಗೆ ಅಪಘಾತವಾದಾಗ ಕತ್ತಲು ಆಗಿತ್ತು. ನನಗೆ ನಂಬರ್ ಗೊತ್ತಿಲ್ಲದ ಮೋಟಾರ್ ಸೈಕಲ್ ಡಿಕ್ಕಿಪಡಿಸಿ ಹೋಗಿರುತ್ತದೆ ಎಂದರೆ ಸಾಕ್ಷಿ ಹೌದು ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಅಪಘಾತವಾದ ನಂತರ ನಾನು ಮೊದಲಿಗೆ ರಾಮಕೃಷ್ಣಯ್ಯ ಆಸ್ಪತ್ರೆಗೆ ಹೋಗಿದ್ದೆನು. ಅಪಘಾತ ಹೇಗೆ ಆಯಿತು ಎಂದು ವೈದ್ಯರು ನನ್ನನ್ನು ಕೇಳಲಿಲ್ಲ. ನನಗೆ ಚಿಕಿತ್ಸೆ ಕೊಟ್ಟ ವೈದ್ಯರ ಹೆಸರು ವೆಂಕಟಪ್ಪ. ನನಗೆ ದಿನಾಂಕ ನೆನಪಿಲ್ಲ. ನಾನು ಡಿಸ್ಚಾರ್ಜ್ ಆದ ನಂತರ ಪುನಃ ಆಟೋದಲ್ಲಿ ಆಸ್ಪತ್ರೆಗೆ ಹೋಗಿ ಬಂದಿರುತ್ತೇನೆ. ನನ್ನ ಬಳಿಯಲ್ಲಿ ಓಪಿಡಿ ಕಾರ್ಡ್ ಇಲ್ಲ. ನನಗೆ ಶಸ್ತ್ರ ಚಿಕಿತ್ಸೆ ಮಾಡಿರುತ್ತಾರೆ. ನನಗೆ ಈ ಅಪಘಾತದಿಂದ ಯಾವುದೇ ರೀತಿಯ ತೀವ್ರ ಸ್ವರೂಪದ ಗಾಯಗಳು ಆಗಿಲ್ಲ ಎಂದರೆ ಸರಿಯಲ್ಲ, ನನಗೆ ಕಾಲಿಗೆ ರಾಡ್ ಹಾಕಿರುತ್ತಾರೆ. (ಸಾಕ್ಷಿ ಈ ದಿನ ನ್ಯಾಯಾಲಯಕ್ಕೆ ಹಾಜರಾಗಿ ಕುಳಿತುಕೊಂಡು ಹೇಳಿಕೆ ನೀಡಿರುತ್ತಾರೆ ನಡೆದಾಡುವ ಯಂತ್ರದ ಸಹಾಯದಿಂದ ನ್ಯಾಯಾಲಯಕ್ಕೆ ಬಂದಿರುತ್ತಾರೆ.)

ನನ್ನ ತಂದೆ ತಾಯಿ ತೀರಿಕೊಂಡಿರುತ್ತಾರೆ. ನನಗೆ 61 ವರ್ಷ ವಯಸ್ಸು. ನನಗೆ ಓಲ್ಡ ಪೆನಷನ್ ಬರುತ್ತಿಲ್ಲ 65ರ ನಂತರ ಕೊಡುತ್ತಾರೆ. ನನ್ನ ಬಳಿ ಆಧಾರ್ ಕಾರ್ಡ್ ಓಟರ್ ಐಡಿ ಇದೆ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. ನನಗೆ 75 ವರ್ಷ ವಯಸ್ಸಾಗಿದ್ದರೂ ಸಹ ನಿಜವಾದ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನಗೆ ಅಪಘಾತದಿಂದ ಯಾವುದೇ ಗಾಯಗಳು ಆಗಿಲ್ಲ ವಯಸ್ಸಾಗಿರುವ ಕಾರಣ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಅಪಘಾತಕ್ಕೆ 2 ಲಕ್ಷ 85 ಸಾವಿರ ಖರ್ಚು ಆಗಿರುತ್ತದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿರುತ್ತೇನೆ. ನನ್ನ ಔಷಧಿ ಚೀಟಿ ವಕೀಲರಿಗೆ ಕೊಟ್ಟಿದ್ದೇನೆ. ನನಗೆ ಅಪಘಾತವಾದಾಗ ಇದ್ದಂತ ಆದಾಯದ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ನನಗೆ ಯಾವುದೇ ರೀತಿಯ ಆದಾಯ ಇಲ್ಲದೇ ಇದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ

ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಸಲುವಾಗಿ ನಾನು ಮತ್ತು ಪೊಲೀಸರು ಷರೀಕ್ ಆಗಿ ದಾಖಲೆಗಳನು ಸೃಷ್ಟಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ:- ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ನಿವೇದಿತ ಟಿ.ಎಂ.)
ರಾಮನಗರದ ಮೋಟಾರು ವಾಹನಗಳ ಅಪಘಾತದ
ಪರಿಹಾರಗಳ ಹೆಚ್ಚುವರಿ ನ್ಯಾಯಾ ಮಂಡಳಿಯ
ಪೀಠಾಧಿಕಾರಿಗಳು